ಸಿ.ಸಿ .ನಂ.288/2023 ಪಿಡಬ್ಲೂಃ 1

ದಿನಾಂಕಃ 09-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಜಿ ಜಿ ಜಿ ವಕೀಲರಿಂದಃ**

3. ಈ ಪ್ರಕರಣದಲ್ಲಿಯ ಸಾಲವನ್ನು 2021 ರಲ್ಲಿ ಪಡೆದುಕೊಂಡಿರುತ್ತಾರೆ . ಆ ಸಮಯದಲ್ಲಿ ನಾನು ಫಿರ್ಯಾದು ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿರಲಿಲ್ಲ . ನನಗೆ ಸಾಲದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ , ದಾಖಲಾತಿಗಳ ಆಧಾರದ ಮೇಲೆ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿ . ಈ ಪ್ರಕರಣದ ಆರೋಪಿ ಸಾಲವನ್ನು ಪಡೆದಿಲ್ಲ , ಅವರು ಜಾಮೀನುದಾರರು . ಸಾಲವನ್ನು ಕೊಡಬೇಕಾದರೆ ಕೆವಾಯ್ ಸಿ ದಾಖಲಾತಿಗಳನ್ನು ಮಾತ್ರ ಪಡೆದುಕೊಂಡಿದ್ದೇವೆ. ಕೆವಾಯ್ ಸಿ ಎಂದರೆ ಆಧಾರ ಕಾರ್ಡ , ಪಾನ ಕಾರ್ಡ ಹಾಗೂ ಅವರ ರೇಶನ್ ಕಾರ್ಡನ್ನು ಪಡೆದುಕೊಂಡಿರುತ್ತೇವೆ. ಇದನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ಸಾಲವನ್ನು ಟೆಲರಿಂಗ್ ಉದ್ದೇಶಕ್ಕಾಗಿ ಕೊಟ್ಟಿರುತ್ತೇವೆ . ಟೆಲರಿಂಗ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಕರಾರು ಪತ್ರವಾಗಲೀ , ಸಾಲದ ಅರ್ಜಿ ಕರಾರು ಪತ್ರ ,ಹೈಪೋಥಿಕೇಶನ್ ಅಗ್ರಿಮೆಂಟ್ ಬಾಂಡ್ ಪ್ರಾಮಿಸರಿ ನೋಟ್ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ . ನಾವು ಕೆವಾಯ್ ಸಿ ದಾಖಲಾತಿಗಳನ್ನು ಮಾತ್ರ ಪಡೆದುಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಸಾಲಗಾರರಿಂದ ಕೆವಾಯ್ ಸಿ ದಾಖಲಾತಿಗಳನ್ನು ಪಡೆದುಕೊಂಡಿದ್ದೇವೆ . ಈಗ ಮೇಲ್ಕಂಡ ಹೇಳಿರುವ ದಾಖಲಾತಿಗಳಿಗೆ ಸಾಲಗಾರರ ಸಹಿಯನ್ನು ಪಡೆದುಕೊಂಡಿದ್ದೇವೆ . ನಿಪಿ-10 ಹೈಪೋಥಿಕೇಶನ್ ಅಗ್ರಿಮೆಂಟ್ ನಲ್ಲಿ ಸಿವಿಂಗ್ ಮಸೀನ್ ನ್ನು ಹೈಪೊಥಿಕೇಶನ್ ಮಾಡಿಕೊಳ್ಳುತ್ತಿದ್ದೇವೆ ಎಂದು ಎಲ್ಲೂ ಬರೆದಿಲ್ಲ ಎಂದರೆ ಸರಿ . ಸಾಲಗಾರರಿಂದ ಪಡೆದುಕೊಂಡ ನಿಪಿ-7 ಸಾಲದ ಕರಾರಿನಲ್ಲಿ ಸಾಲಗಾರರು ಸಾಲದ ಹಣವನ್ನು ಕಟ್ಟದೇ ಇದ್ದಾಗ ಅದನ್ನು ಜಾಮೀನುದಾರರಿಂದ ಹಣವನ್ನು ಮರು ಪಾವತಿ ಪಡೆಯಲಾಗುತ್ತದೆ ಎಂದು ಯಾವುದೇ ಕಾಗದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ .

ಪಿಡಬ್ಲೂಃ 1

ಆರೋಪಿ ಯಾವುದೇ ಸಾಲವನ್ನು ಪಡೆದಿಲ್ಲ ಎಂದರೆ ಸಾಕ್ಷಿ ಅವರು ಸಾಲಕ್ಕೆ ಜಾಮೀನುದಾರರಾಗಿದ್ದಾರೆ ಎಂದು ನುಡಿದಿರುತ್ತಾರೆ . ಸಾಲದ ಮರು ಪಾವತಿಗಾಗಿ ನಮ್ಮ ಕಚೇರಿಯಿಂದ ಆರೋಪಿಗೆ ಹಾಗೂ ಜಾಮೀನುದಾರರಿಗೆ ನೋಟಿಸು ಮಾಡಿದ್ದೇವೆ . ಆ ನೋಟಿಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲದ ಮರುಪಾವತಿಗಾಗಿ ಆರೋಪಿಗಾಗಲೀ , ಸಾಲಗಾರರಿಗಾಗಲೀ ಯಾವತ್ತೂ ನೋಟಿಸು ಮಾಡಿಲ್ಲ ಎಂದರೆ ಸರಿಯಲ್ಲ . ಚೆಕ್ ನ್ನು ಸಾಲ ವಸೂಲಾತಿಗೆ ಹೋದ ಸಂದರ್ಭದಲ್ಲಿ ಪಡೆದಿರುತ್ತೇವೆ . ಆರೋಪಿ ಒಂದೇ ಚೆಕ್ ನ್ನು ಕೊಟ್ಟಿರುತ್ತಾರೆ . ಚೆಕ್ ನ ಮೇಲೆ ಅಮೌಂಟನ್ನು ಬರೆದುಕೊಟ್ಟಿರುತ್ತಾರೆ. ಆರೋಪಿ ಯಾವುದೇ ಚೆಕ್ ನ್ನು ಕೊಟ್ಟಿಲ್ಲ ಅವರು ಬ್ಯಾಂಕಿಗೆ ಬಂದಾಗ ನಾವು ಅವರಿಗೆ ಗುರುತಿಲ್ಲದ ರೀತಿಯಲ್ಲಿ ಅವರ ಚೆಕ್ ನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-2(ಎ) ಮತ್ತು ನಿಪಿ-5 ಚೆಕ್ ಮತ್ತು ನಮ್ಮ ವಕೀಲರ ಮುಖಾಂತರ ಮಾಡಿದಂತಹ ನೋಟಿಸಿನಲ್ಲಿರುವ ಎರಡೂ ಸಹಿಗಳು ಬೇರೆ ಬೇರೆ ಇವೆ ಎಂದರೆ ಸರಿಯಲ್ಲ. ನಿಪಿ-2(ಎ) ರಲ್ಲಿರುವ ಸಹಿ ಹಾಗೂ ಸೆಂಟ್ ಮಿಲಾಗ್ರಿಸ್ ಎಂದು ಬರೆದಿರುವ ಇಂಕಿನ ಸಹಿ ಎರಡು ಬೇರೆ ಬೇರೆ ಇವೆ ಎಂದರೆ ಸರಿಯಲ್ಲ . ಆರೋಪಿ ಏನು ವಿದ್ಯಾಬ್ಯಾಸ ಮಾಡಿದ್ದಾರೆ ಗೊತ್ತಿಲ್ಲ. ಆರೋಪಿ ಶಾಲೆಗೆ ಹೋದಿದ್ದಿಲ್ಲ. ಅವರಿಗೆ ನಾವು ಬರೆದಂತಹ ಇಂಗ್ಲೀಷ ಓದಲು ಬರುವುದಿಲ್ಲ ಎಂದರೆ ಸಾಕ್ಷಿ ನಾವು ಬರೆದಿಲ್ಲ ಎಂದು ನುಡಿದಿರುತ್ತಾರೆ . ಚೆಕ್ ನಲ್ಲಿರುವ ಬರವಣಿಗೆ ಯಾರ ಹತ್ತಿರ ಬರೆಸಿಕೊಟ್ಟರು ಗೊತ್ತಿಲ್ಲ. ಆರೋಪಿ ಯಾವತ್ತೂ ನಮಗೆ ಚೆಕ್ ನ್ನು ಇಂಗ್ಲೀಷನಲ್ಲಿ ಬರೆದುಕೊಟ್ಟಿಲ್ಲ , ನಾವು ಅವರ ಬಳಿ ಇರುವ ಚೆಕ್ ನ್ನು ಅವರಿಗೆ ಗೊತ್ತಿಲ್ಲದಂತೆ ಪಡೆದು ದುರುಪಯೋಗ ಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

4. ಸಾಲದ ಮೊತ್ತವನ್ನು ಸಾಲಗಾರರ ಉಳಿತಾಯ ಖಾತೆಗೆ ಹಾಕಿರುತ್ತೇವೆ . ಸಾಲವನ್ನು ಕೊಟ್ಟಾಗ ಸಾಲದ ಹಣವನ್ನು ಸಾಲಗಾರರ ಉಳಿತಾಯ ಖಾತೆಗೆ ಜಮಾ ಮಾಡುತ್ತೇವೆ . ನಂತರ ಅವರು ಎಫ್ ಡಿ ಹಾಗೂ ಷೇರು ಮಾಡಿ ಕೊಡುತ್ತಾರೆ . ಆರೋಪಿ ಸಾಲದ ಹಣವನ್ನು ಯಾವತ್ತೂ

ಉಪಯೋಗಿಸಿಕೊಂಡಿಲ್ಲ. ಕಾರಣ ಆರೋಪಿ ಯಾವತ್ತೂ ಹಣವನ್ನು ತುಂಬಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ . ಆರೋಪಿ ನಾವು ಹೇಳಿದಂತಹ ಹಣವನ್ನು ತುಂಬಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.